ನೀಡಲಾಗುವುದು. ನಿವೇಶನರಹಿತರಿಗೆ ನಿವೇಶನ ಒದಗಿಸಲು ನಗರ ನಿವೇಶನ ಯೋಜನೆ ಇದ್ದು, ಈ ಯೋಜನೆಯಡಿಯಲ್ಲಿ ನಿವೇಶನಗಳನ್ನು ಹಂಚಲಾಗುವುದು. ನಿವೇಶನ ಹಂಚಲು ಸರ್ಕಾರಿ ಜಮೀನ ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಮೇಲೆ ತಿಳಿಸಿರುವಂತ ಕ್ರಮ ಕೈಗೊಂಡು ಜಮೀನು ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. ತದನಂತರ ನಿವೇಶನ ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಿ ಮನೆಗಳನ್ನು ನೀಡಲಾಗುವುದು.

ಸಸಂಖ್ಯೆ: ವಇ 28 ಹೆಚಿಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

164ಶ್ರೀ ಸಿದ್ದು ಸವದಿ (ತೆರದಾಳ್)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.
ರಾಜ್ ಸಚಿವರು

ಅ. ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮ ಪಂಚಾಯತಿಗಳಿವೆ; ಯಾವ ನಿಯಮಾವಳಿ ಪ್ರಕಾರ ರಚನೆ ಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು 5628 ಗ್ರಾಮ ಪಂಚಾಯಿತಿಗಳಿರುತ್ತವೆ. ಇವುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳು 1993ರ ಪ್ರಕರಣ 4 ಮತ್ತು 5 ರನ್ವಯ ರಚನೆ ಮಾಡಲಾಗುವುದು./ ಮಾಡಲಾಗಿದೆ.

ಆ. ಹಾಲಿ ಗ್ರಾಮ ಪಂಚಾಯತ್‌ಗಳಿಂದ ಬೇರ್ಪಟ್ಟು, ಹೊಸ ಪಂಚಾಯತ್‌ಗಳಿಗೆ ಬೇಡಿಕೆಯಿದ್ದು, ಅದನ್ನು ಹೇಗೆ ಮತ್ತು ಎಂದು ರಚನೆ ಮಾಡಲಾಗುವುದು;

ಕ.ಪಂ.ರಾ. ಅಧಿನಿಯಮ 1993ರ ಪ್ರಕರಣ 4(1)(2)(ಎ)(ಬಿ) ರನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರದ ಸಾಮಾನ್ಯ ಮತ್ತು ವಿಶೇಷ ಆದೇಶಗಳಿಗೆ ಒಳಪಟ್ಟು ಅನುಮತಿಯೊಂದಿಗೆ ಕ್ರಮ ಕೈಗೊಳ್ಳುವರು.

ಇ. ಮಾಡದಿದ್ದಲ್ಲಿ, ಸಣ್ಣ ಗ್ರಾಮಗಳಿಗೆ ತಾರತಮ್ಯವಾಗುವುದರಿಂದ ಅದನ್ನು ಸರಿಪಡಿಸಲು ಯೋಜನೆಯನ್ನೇನಾದರೂ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

(ಆ) ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಗ್ರಾಅಪ:18: ಗ್ರಾಪಸ:2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಕರ್ನಾಟಕ ವಿಧಾನಸಭೆ

166 ಶ್ರೀ ಸಿದ್ದು ಸವದಿ (ತೇರದಾಳ್)

ಅ. ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳಿಗೆ ಮಲ್ಟಿವಿಲೇಜ್ ಯೋಜನೆಯಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಮಾಡಲಾಗಿದೆ;

ತೇರದಾಳ ಮತಕ್ಷೇತ್ರದಲ್ಲಿ ಮಲ್ಟಿ ವಿಲೇಜ್ ಯೋಜನೆಯಡಿಯಲ್ಲಿ 12 ಗ್ರಾಮಗಳನ್ನೊಳಗೊಂಡ 2 ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿವೆ. ಇದಲ್ಲದೆ, ಜಮಖಂಡಿ ತಾಲ್ಲೂಕಿನ ಯಲ್ಲಟ್ಟಿ ಮತ್ತು ಹಳಿಂಗಳಿ ಯೋಜನೆಯಡಿ 9 ಗ್ರಾಮಗಳ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡಲಾಗಿದೆ.

ಆ. ಈ ಯೋಜನೆಗಳು ಯಾವ ಹಂತದಲ್ಲಿ ಇವೆ; ಎಂದಿನಿಂದ ಪ್ರಾರಂಭಿಸಲಾಗುವುದು;

ಈ ಯೋಜನೆಗಳ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಮಾರ್ಚ್ 2009ರಲ್ಲಿ ಕಾಮಗಾರಿ ಪ್ರಾರಂಭಿಸಲು ಉದ್ದೇಶಿಸಿದೆ.

ಇ. ರಾಜ್ಯದಲ್ಲಿ ಈ ಯೋಜನೆಯಲ್ಲಿ ಎಷ್ಟು ಕೆಲಸಗಳನ್ನು ಪ್ರಾರಂಭಿಸಲಾಗಿದೆ; ಕ್ಷೇತ್ರವಾರು ಮಾಹಿತಿ ನೀಡುವುದು?

ರಾಜ್ಯದಲ್ಲಿ ಈ ತೆರನಾದ 194 ಬಹುಗ್ರಾಮ ಯೋಜನೆಗಳನ್ನು ಮಂಜೂರು ಮಾಡಲಾಗಿದ್ದು 38 ಪೂರ್ಣಗೊಂಡಿವೆ. 2005-06ನೇ ಸಾಲಿನಿಂದ ಮಂಜೂರಾದ 144 ಯೋಜನೆಗಳ ಪೈಕಿ 107 ಯೋಜನೆಗಳಿಗೆ ಕಾರ್ಯದೇಶ ನೀಡಲಾಗಿದೆ. ಜಿಲ್ಲಾವಾರು ಸಬ್‌ಮಿಷನ್ ಕಾರ್ಯಕ್ರಮದಡಿ ಮಂಜೂರಾದ ಯೋಜನೆಗಳ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.

A. For how many villages drinking water projects have been formulated under Multi village Scheme in Therdal Constituency;

2 Drinking water schemes consisting of 12 villages have been sanctioned under Multi Village Scheme in Therdal Constituency. Apart from this, 9 villages drinking water scheme have been